ಈ) ೧೯೫೭ರಲ್ಲಿ ಪ್ರಾರಂಭವಾದ ಸದರಿ ಆಸ್ಪತ್ರೆಯು ಕಟ್ಟಡಕ್ಕೆ ಈವರೆಗೂ ದುರಸ್ತಿಯಾಗದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ? ಹಾಗಿದ್ದಲ್ಲಿ ಆ ಬಗ್ಗೆ ಕೈಕೊಂಡ ಕ್ರಮವೇನು ?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಬಂದಿದೆ. ಸವದತ್ತಿ ಜನರಲ್ ಆಸ್ಪತ್ರೆಯೂ ಸೇರಿದಂತೆ ೨೭ ಸಾರ್ವತ್ರಿಕ ಆಸ್ಪತ್ರೆಗಳಿಗೆ ಹೆಚ್ಚಿಗೆ ಸಿಬ್ಬಂದಿಯನ್ನು ಮಂಜೂರು ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಬಂದಿದೆ. ಈ ಬಗ್ಗೆ ವಿವರಗಳನ್ನು ಕೇಳಿದ್ದು, ಅವು ಬಂದ ನಂತರ ಮುಂದಿನ ಕ್ರಮವನ್ನು ಕೈಕೊಳ್ಳಲಾಗುವುದು.

ಹಲ್ಲರ್ ಉಪಯೋಗಿಸುವ ರೈತರ ಮೇಲೆ ಮಾರಾಟ ತೆರಿಗೆ ವಸೂಲು ಮಾಡುತ್ತಿರುವುದು

೫೯೯. ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳ್ತಂಗಡಿ ತಾಲ್ಲೂಕಿನ ರೈತರು ತಮ್ಮ ಸ್ವಂತಕ್ಕಾಗಿ ಉಪಯೋಗಿಸುತ್ತಿರುವ ಳ ನಂ. ಹಲ್ಲರಿನ ಮೇಲೆ ಮಾರಾಟ ತೆರಿಗೆಯನ್ನು ವಿಧಿಸಿರುವುದು ಮತ್ತು ಸದರಿ ಹಲ್ಲರನ್ನು ಮಾರಾಟ ತೆರಿಗೆ ಇಲಾಖೆಯಲ್ಲಿ ನೋಂದಾಯಿಸಬೇಕಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ,

ಆ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ವಹಿವಾಟು ಎಷ್ಟೇ ಇರಲಿ ಬತ್ತದ ಮಿಲ್ಲಿನವರು ನೋಂದಣಿ ಮಾಡಿಸಬೇಕು. ಆದರೆ ಅವರು ಕೊಳ್ಳುವ ಅಥವಾ ಮಾರಾಟದ ವಾರ್ಷಿಕ ವಹಿವಾಟು ರೂ. ಒಂದು ಲಕ್ಷಗಳಿಗಿಂತ ಹೆಚ್ಚಾಗಿದ್ದಲ್ಲಿ ಮಾತ್ರ ತೆರಿಗೆಯನ್ನು ಕೊಡಬೇಕಾಗುತ್ತದೆ.

ಆ) ಇಲಾಖೆಯ ಅನುಭವದಲ್ಲಿ ಬತ್ತ ಮತ್ತು ಅಕ್ಕಿಯ ವ್ಯಾಪಾರದಲ್ಲಿ ತೆರಿಗೆ ತಪ್ಪಿಸಿಕೊಳ್ಳುವುದು ಕಂಡು ಬರುತ್ತಿರುವುದರಿಂದ ನೋಂದಣಿಯನ್ನು ಮಾಡುವುದು ಅಗತ್ಯವಾಗಿದೆ.

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಇ.ಸಿ.ಜಿ. ಯಂತ್ರಗಳು ಕೆಲಸ ನಿರ್ವಹಿಸದಿರುವುದು

೬೨೦೬. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವಿಕ್ಟೋರಿಯ ಆಸ್ಪತೆಯ ಇ. ಸಿ. ಜಿ. ಯಂತ್ರಗಳು ಕೆಲಸ ಮಾಡುತ್ತಿಲ್ಲ ಎಂಬ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೆ,

ಆ) ಹಾಗಾದರೆ ಈ ಇ.ಸಿ.ಜಿ. ಯಂತ್ರಗಳನ್ನು ದುರಸ್ತಿ ಪಡಿಸಲು ಸರ್ಕಾರವು ತಕ್ಷಣವೇ ಕ್ರಮ ತೆಗೆದುಕೊಂಡಿದೆಯೆ ?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು).—

ಅ) ವಿಕ್ಟೋರಿಯಾ ಆಸ್ಪತ್ರೆಯ ಒಂಭತ್ತು ಇ.ಸಿ.ಜಿ. ಯಂತ್ರಗಳಲ್ಲಿ ಮೂರು ಇ.ಸಿ.ಜಿ. ಯಂತ್ರಗಳು ಕೆಲಸ ಮಾಡುತ್ತಿಲ್ಲ.

ಆ) ಎರಡು ಇ.ಸಿ.ಜಿ. ಯಂತ್ರಗಳ ದುರಸ್ತಿ ಬಗ್ಗೆ ಈಗಾಗಲೇ ಕ್ರಮ ಕೈಗೊಂಡಿದೆ. ಮೂರನೇ ಇ.ಸಿ.ಜಿ. ಯಂತ್ರವನ್ನು ಅನುಪಯುಕ್ತಗೊಳಿಸಬೇಕಾಗಿದೆ.